# ಬೆಂಕಿಯಲ್ಲಿ ಅರಳಿದ ಹೂವು

■ ಪ್ರವೀಣ ಕುಲಕರ್ಣಿ

'ನಾನು ಹಾಡು ಹಾಡುವೆ ಎಂದೊಡನೆ ನನ್ನ ನೆರೆಹೊರೆಯವರೆಲ್ಲ ಒಮ್ಮೆ ಜೋರಾಗಿ ನಕ್ಕುಬಿಟ್ಟರು. ಗೇಲಿ ಮಾಡಲು ಅರೆಕ್ಷಣವೂ ಅವರು ಹಿಂದೆ ಮುಂದೆ ನೋಡಲಿಲ್ಲ. ನೀನು ಮನೆಯಿಂದ ಆಚೆ ಹೋಗುವುದನ್ನು ಹಾಗೂ ಹಾಡು ಹಾಡುವುದನ್ನು ನಾವು ಯಾರೂ ಒಪ್ಪುವುದಿಲ್ಲ. ನೀನು ಹುಡುಗಿ. ಮನೆಯಲ್ಲೇ ಇರಬೇಕು. ಇಂತಹ ಹುಚ್ಚಾಟಗಳಿಗೆ ಹೋದರೆ ಹುಷಾರ್ ಎಂದು ಧಮಕಿಯನ್ನೂ ಹಾಕಿದರು.'

ಇರಾಕ್‌ನ ಮೊಸುಲ್ ನಗರದ ಹದಿನಾರರ ಹುಡುಗಿ ನೂರ್ ಇಬ್ರಾಹಿಂ ಹೀಗೆ ನೆನಪುಗಳನ್ನು ಕೆದಕುವಾಗ ಅವಳಲ್ಲಿ ವಿಷಾದ ಭಾವ ಎದ್ದುಕಾಣುತ್ತಿತ್ತು. 'ನಾನು ಮನೆಯಿಂದ ಹೊರಬರಲು ಹಾಗೂ ಹಾಡು ಹೇಳಲು ನಿರ್ಧರಿಸಿಬಿಟ್ಟಿದ್ದೆ. ಯಾವ ಗೇಲಿಯಾಗಲೀ ಧಮಕಿಯಾಗಲೀ ನನ್ನ ಮುಂದೆ ನಡೆಯಲಿಲ್ಲ' ಎಂದು ಕೈಯಲ್ಲಿ ಗಿಟಾರ್ ಹಿಡಿದು, ಈ ಯುವ ಗಾಯಕಿ ಹೇಳುವಾಗ ಕಣ್ಣುಗಳಲ್ಲಿ ಸಾವಿರ ವ್ಯಾಟ್ ಬಲ್ಬು ಹೊತ್ತಿ ಉರಿದ ಸಂಭ್ರಮ.

ಮೊಸುಲ್ ಗೊತ್ತಲ್ಲ? ಇಸ್ಲಾಮಿಕ್ ಸ್ಟೇಟ್ ಉಗ್ರ ಸಂಘಟನೆಯ (ಐಎಸ್‌ಐಎಸ್) ಸ್ಥಾಪಕ ಅಬುಬಕರ್ ಅಲ್ ಬಾಗ್ದಾದಿ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ ಊರು. 11ರಿಂದ 46 ವರ್ಷದೊಳಗಿನ ಮಹಿಳೆಯರು ಕಡ್ಡಾಯವಾಗಿ 'ಜನನಾಂಗ ಛೇದನ' ಮಾಡಿಸಿಕೊಳ್ಳಬೇಕು ಎಂಬ ಫತ್ವಾ ಜಾರಿಯಲ್ಲಿದ್ದ ಊರು. ಮಹಿಳೆಯರಿಗೆ ಮನೆ ಬಿಟ್ಟು ಆಚೆಗೆ ಬರುವುದಿರಲಿ, ಮನೆಯಲ್ಲೇ ಒಂದು ನೆಮ್ಮದಿ ಬದುಕು ಕಂಡುಕೊಳ್ಳಲು ಕಷ್ಟಸಾಧ್ಯವಾಗಿದ್ದ ಊರು. ಬೆಂಕಿಯಂತಹ ಅಂತಹ ಊರಲ್ಲಿ ಅರಳಿದ ಹೂವು ನೂರ್.

ಮಧ್ಯಪ್ರಾಚ್ಯದಲ್ಲಿ ದೊಡ್ಡ ಶೈಕ್ಷಣಿಕ ಕೇಂದ್ರ ಎಂಬ ಖ್ಯಾತಿಯನ್ನು ಹೊಂದಿದ್ದ ಮೊಸುಲ್‌ನಲ್ಲಿ ಬಹುದೊಡ್ಡ ವಿಶ್ವವಿದ್ಯಾಲಯವೂ ಇದೆ. ವೈದ್ಯಕೀಯ ಕಾಲೇಜು ಕೂಡ ಉಂಟು. ಆದರೆ, ಯುವತಿಯರಿಗೆ ಅಲ್ಲಿ ಕಲಿಯಲು ಅವಕಾಶವೇ ಇರಲಿಲ್ಲ. ಯಾವುದೇ ಮಹಿಳೆ ಮನೆಯಿಂದ ಹೊರಹೋಗುವ ಪ್ರಸಂಗ ಬಂದರೆ ಅವಳ ಜತೆ ಒಬ್ಬ ಪುರುಷ ಪಾಲಕ ಇರಬೇಕು ಹಾಗೂ ಅವಳು ಕಡ್ಡಾಯವಾಗಿ ಬುರ್ಖಾ ಧರಿಸಿರಬೇಕು ಎನ್ನುತ್ತಿತ್ತು ಇಲ್ಲಿನ ನಿಯಮ. ತಪ್ಪಿದರೆ ಪುರುಷ ಪಾಲಕನಿಗೆ 40 ಛಡಿ ಏಟಿನ ಶಿಕ್ಷೆಯಿತ್ತಂತೆ.


ಗುರು ಫಾದಿಲ್ ಅಲ್ ಬದ್ರಿ ಜತೆ ಗಾಯಕಿ ನೂರ್ ಇಬ್ರಾಹಿಂ

ರಿಂಜ್ ಫೌಂಡೇಶನ್‌ನ ಮಾಹಿತಿ ಪ್ರಕಾರ, ಮೊಸುಲ್‌ನಲ್ಲಿ ನಡೆದಷ್ಟು ಅತ್ಯಾಚಾರ ಪ್ರಕರಣಗಳು ಇರಾಕ್‌ನ ಬೇರೆ ಎಲ್ಲಿಯೂ ನಡೆದಿಲ್ಲ. ಆಸ್ಪತ್ರೆಗೆ ಬರುತ್ತಿದ್ದ ಮಹಿಳೆಯರಲ್ಲಿ ಬಹುಪಾಲು ಮಂದಿ ಅತ್ಯಾಚಾರ ಸಂತ್ರಸ್ತೆಯರೇ ಇರುತ್ತಿದ್ದರು ಎಂದೂ ರಿಂಜ್‌ನ ವರದಿ ಹೇಳುತ್ತದೆ. ಐಎಸ್‌ಐಎಸ್ ಕಾಲದಲ್ಲಿ ಭಾರಿ ಪ್ರಮಾಣದಲ್ಲಿ ಯುವತಿಯರ ಕಳ್ಳಸಾಗಣೆ ನಡೆದ ಕುರಿತು ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಹಿನ್ನೆಲೆಯಲ್ಲಿ ಯೋಚಿಸಿ ನೋಡಿದಾಗ ನೂರ್‌ನ ಸಾಧನೆಯ ಮಹತ್ವ ಏನೆಂಬುದು ಅರಿವಿಗೆ ಬರುತ್ತದೆ.

ಇರಾಕ್‌ನ ಕಟ್ಟಾ ಸಂಪ್ರದಾಯವಾದಿ ಸಮಾಜದಲ್ಲಿ ಮಹಿಳೆಯರು ಈಗಲೂ ಮನೆ ಬಿಟ್ಟು ಆಚೆ ಹೋಗುವಂತಿಲ್ಲ. ಹಾಡು, ನೃತ್ಯದಂತಹ ಕಲೆಗಳಲ್ಲಿ ಪಾಲ್ಗೊಳ್ಳುವುದು ಕೂಡ ನಿಷಿದ್ಧ. ಅಂತಹ ಕಟ್ಟುಪಾಡುಗಳಿಗೆ ಸವಾಲು ಎಸೆದ ನೂರ್ ಈಗ ಅರಬ್ ಸಮೂಹದಲ್ಲಿ ಜನಪ್ರಿಯ ಗಾಯಕಿ. ಚಿಕ್ಕವಳಿದ್ದಾಗಿನಿಂದ ನೂರ್‌ಗೆ ಸಂಗೀತದ ಮೇಲೆ ವಿಶೇಷ ಆಸಕ್ತಿ. 'ಇರಾಕ್‌ನ ಹಳೆಯ ಹಾಡುಗಳನ್ನು ಕೇಳುವುದೆಂದರೆ ನನಗೆ ಪಂಚಪ್ರಾಣ. ಅಡುಗೆ ಮನೆಯಲ್ಲಿ ಅಮ್ಮನಿಗೆ ಸಹಾಯ ಮಾಡುವಾಗಲೂ ನಾನು ಹಾಡನ್ನು ಗುನುಗುನಿಸುತ್ತಿದ್ದೆ' ಎಂದು ಅವಳೇ ಹೇಳುತ್ತಾಳೆ.

ನೂರ್‌ಗೆ ಸಂಗೀತದಲ್ಲಿ ಆಸಕ್ತಿ ಹೆಚ್ಚಿದಂತೆ ವಾದ್ಯ ಸಲಕರಣೆಗಳಿಗೆ ಸಂಬಂಧಿಸಿದಂತೆ ಇಂಟರ್ನೆಟ್‌ನಲ್ಲಿ ಹುಡುಕಾಟ ನಡೆಸತೊಡಗಿದಳು. ಯಾವ ಸಲಕರಣೆಯನ್ನು ಹೇಗೆ ನುಡಿಸುತ್ತಾರೆ ಎಂಬುದನ್ನು ಲಕ್ಷ್ಯವಿಟ್ಟು ನೋಡುತ್ತಿದ್ದಳು. ದಿನದಿಂದ ದಿನಕ್ಕೆ ಅವಳ ಸಂಗೀತ ಜ್ಞಾನ ವೃದ್ಧಿಯಾಗುತ್ತಾ ಬಂತು. ವಾದ್ಯ ಹಾಗೂ ಗಾಯನ ಎರಡರಲ್ಲೂ ಆಕೆ ತೀವ್ರ ಆಸಕ್ತಿ ಬೆಳೆಸಿಕೊಂಡಳು.

'ರಾತ್ರಿ ಮಲಗಿದಾಗ ನನಗೆ ಕನಸುಗಳು ಬೀಳುತ್ತಿದ್ದವು. ಅಂತಹ ಬಹುತೇಕ ಕನಸುಗಳಲ್ಲಿ ನಾನು ಕಛೇರಿ ನಡೆಸುತ್ತಿದ್ದೆ' ಎಂದು ನಗುತ್ತಾಳೆ ನೂರ್. ಅವಳ ಈ ತೀವ್ರ ತರಹದ ಆಸಕ್ತಿಯ ಕಾರಣವೇ ಅವಳಿಗೆ ಫಾದಿಲ್ ಅಲ್–ಬದ್ರಿ ಅವರ ರೂಪದಲ್ಲಿ ಸಂಗೀತದ ಮೇಷ್ಟ್ರು ಸಿಕ್ಕರು. ನೂರ್‌ಳ ಪ್ರತಿಭೆ ಎಂತಹದ್ದು ಎಂಬುದನ್ನು ಬಹುಬೇಗ ಗುರುತಿಸಿದ ಅವರು, ತರಬೇತಿ ನೀಡಲು ಆರಂಭಿಸಿದರು.

'ಮೊಸುಲ್‌ನಲ್ಲಿ ಪ್ರತಿಭೆಗಳಿಗೇನೂ ಬರವಿಲ್ಲ. ನಮ್ಮದು ಧರ್ಮಭೀರು ಸಮುದಾಯ ನೋಡಿ. ಯುವತಿಯರು ಮನೆಬಿಟ್ಟು ಹೊರಬರುವುದು ಸುಲಭವಲ್ಲ. ಆದರೆ, ಈಗೀಗ ನಮ್ಮ ಸಮುದಾಯ ಸ್ವಲ್ಪ ಸ್ವಲ್ಪ ಹೊರ ಜಗತ್ತಿಗೆ ತೆರೆದುಕೊಳ್ಳುತ್ತಿದೆ. ಐಎಸ್‌ಐಎಸ್‌ನಿಂದ ನಮ್ಮ ಪ್ರದೇಶ ಮುಕ್ತಿ ಪಡೆದ ಬಳಿಕ ಇಲ್ಲಿ ನಿಧಾನವಾಗಿ ಸಂಗೀತ, ಕಲೆಯಂತಹ ಚಟುವಟಿಕೆಗಳು ಗರಿಗೆದರುತ್ತಿವೆ' ಎಂದು ಫಾದಿಲ್ ವಿವರಿಸುತ್ತಾರೆ. ಹೌದು, 'ಊಂ ಗಯರ್ನ್...' ಎಂದು ನೂರ್ ರಾಗ ತೆಗೆಯುವಾಗ ಕಾರ್ಮೋಡದ ಅಂಚಿನಲ್ಲಿ ಬೆಳ್ಳಿಗೆರೆಯೊಂದು ಮಿಂಚಿದಂತೆ ಭಾಸವಾಗುತ್ತದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65